[redacted]



# ವಲಸೆ ಯಾಕ್ರೀ, ನಿಮ್ಮೂರಲ್ಲೇ ಉದ್ಯೋಗ ಖಾತ್ರಿ, ದುಡಿಮೆ ಖಾತ್ರಿ ಅಭಿಯಾನ ಜಿಲ್ಲೆಯಾದ್ಯಂತ ಏಪ್ರಿಲ್ 01 ರಿಂದಲೇ ನರೇಗಾ ಕೆಲಸ ಆರಂಭಿಸಿ– ಜಿಪಂ ಸಿಇಓ



ಗದಗ: ಜಿಲ್ಲೆಯಾದ್ಯಂತ ಆಯುಕ್ತಾಲಯದ ನಿರ್ದೇಶನದಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ "ವಲಸೆ ಯಾಕ್ರೀ, ನಿಮ್ಮೂರಲ್ಲೇ ಉದ್ಯೋಗ ಖಾತ್ರಿ / ಉದ್ಯೋಗ ಖಾತ್ರಿ ದುಡಿಮೆ ಖಾತ್ರಿ" ಅಭಿಯಾನವನ್ನು ಮಾರ್ಚ್ 15 ರಿಂದ ಮೇ ಮಾಹೆಯ ಅಂತ್ಯದವರೆಗೂ ಹಮ್ಮಿಕೊಂಡಿದ್ದು ಗ್ರಾಮೀಣರು ಇದರ ಸದುಪಯೋಗ ಪಡಿಸಿಕೊಳ್ಳಲು ಜಿಪಂ ಸಿಇಓ ಭರತ್ ಎಸ್ ಅವರು ಮನವಿ ಮಾಡಿರುತ್ತಾರೆ.

ನಮ್ಮ ಜಿಲ್ಲೆಯ ಕೆಲವು ಗ್ರಾಮಗಳಿಂದ ಸಾಮಾನ್ಯವಾಗಿ ಪ್ರತಿ ವರ್ಷ ಬೇಸಿಗೆ ಬಂತೆಂದರೆ ಊರನ್ನು ಬಿಟ್ಟು ನಗರ ಪ್ರದೇಶಗಳಿಗೆ ಉದ್ಯೋಗ ಅರಸಿ ವಲಸೆ ಹೋಗುವುದು ಸರ್ವೇಸಾಮಾನ್ಯವಾಗಿ ಕಂಡುಬರುತ್ತದೆ ಹಾಗಾಗಿ ಉದ್ಯೋಗ ಚೀಟಿ ಹೊಂದಿರುವ ಎಲ್ಲಾ ಕುಟುಂಬಗಳು ಗ್ರಾಮ ಪಂಚಾಯತಿ ವತಿಯಿಂದ ಹಮ್ಮಿಕೊಂಡಿರುವ ಈ ಅಭಿಯಾನದಲ್ಲಿ ಸ್ಥಳೀಯವಾಗಿ ಉದ್ಯೋಗ ಪಡೆದು ಯೋಜನೆಯ ಸೌಲಭ್ಯವನ್ನು ಪಡೆಯಬೇಕು.

ಈ ಅಭಿಯಾನದ ಮೂಲ ಉದ್ದೇಶವೇ ಬೇಸಿಗೆ ವಲಸೆಯನ್ನು ನಿಯಂತ್ರಣ ಮಾಡುವುದಾಗಿದ್ದು ಈಗಾಗಲೇ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ಗ್ರಾಮ ಕಾಯಕ ಮಿತ್ರ / ತಾಂಡಾ ರೋಜಗಾರ ಮಿತ್ರ ಹಾಗೂ ಕ್ರಿಯಾಶೀಲ ಕಾಯಕ ಬಂಧುಗಳಿಂದ ಉದ್ಯೋಗ ಚೀಟಿದಾರರ ಕುಟುಂಬಗಳ ಮನೆ –ಮನೆ ಭೇಟಿ ಕಾರ್ಯ ನಡೆಯುತ್ತಿದ್ದು ಏಪ್ರೀಲ್ 1 ರಿಂದಲೇ ಸ್ಥಳೀಯವಾಗಿ ಕೆಲಸ ನೀಡಲಾಗುತ್ತಿದ್ದು, ನಮೂನೆ 6ರಲ್ಲಿ ಕೂಲಿ ಬೇಡಿಕೆ ಪಡೆಯುವಂತೆ ನಿರ್ದೇಶನ ನೀಡಲಾಗಿದೆ, ಜಿಲ್ಲೆಯು ಕಳೆದ 2023–24 ನೇ ಸಾಲಿನಲ್ಲಿ ಆಯುಕ್ತಾಲಯದ ಗುರಿಯನ್ನು ವರ್ಷಕ್ಕಿಂತ ಮೊದಲೇ ಸಾಧಿಸಲಾಗಿದ್ದು ಈ ಪ್ರಸಕ್ತ ವರ್ಷವು ಸಹ ಬೇಗನೆ ಕೆಲಸ ನೀಡುವ ಮೂಲಕ ಗುಳೆ ತಪ್ಪಿಸಿ ಸ್ಥಳಿಯವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡಾ ಕೂಲಿಕಾರರಿಗೆ ಉದ್ಯೋಗ ಒದಗಿಸುವಂತೆ ತಳಮಟ್ಟದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ ಸೂಚನೆ ನೀಡಲಾಗಿದೆ.

ಬಿಸಿಲಿನ ತಾಪ ಹೆಚ್ಚಾಗಿರುವ ಕಾರಣ ಕೆಲಸದ ಸ್ಥಳಗಳಲ್ಲಿ ಕೂಲಿಕಾರರಿಗೆ ಪ್ರಥಮ ಚಿಕಿತ್ಸೆ, ನೆರಳು, ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುತ್ತದೆ ಎಂದು ತಿಳಿಸಿದರು ಹಾಗೂ ಕೂಲಿಕಾರರು ಕೆಲಸದ ಸ್ಥಳದಲ್ಲಿ ಮಕ್ಕಳನ್ನು ಕರೆತರಬಾರದು ಅದಕ್ಕಾಗಿ ಆರು ತಿಂಗಳಿಂದ ಮೂರು ವರ್ಷದ ಮಕ್ಕಳಿಗೆ ನಮ್ಮ ಗ್ರಾಮ ಪಂಚಾಯತಿಯಿಂದ ಕೂಸಿನ ಮನೆ ಆರಂಭಮಾಡಿದ್ದು,ತಾವುಗಳು ತಮ್ಮ ಮಕ್ಕಳನ್ನು ಅಲ್ಲಿಯೇ ಬಿಟ್ಟು ಕೆಲಸಕ್ಕೆ ಹೋಗಲು ಅವಕಾಶವಿದ್ದು ಇದರಿಂದ ಪಾಲಕರಿಬ್ಬರು ಯೋಜನೆಯಡಿ ಕೆಲಸಕ್ಕೆ ತೆರಳಿದಾಗ ಮಕ್ಕಳ ಲಾಲನೆ ಪಾಲನೆ ಕೊರತೆ ನೀಗಿದಂತಾಗಿದೆ ಇದರಿಂದ ಯೋಜನೆಯಡಿ ಹೆಚ್ಚಿನ ಜನರು ಪಾಲ್ಗೊಂಡು ಯೋಜನೆ ಸೌಲಭ್ಯ ಪಡೆದು ಕೊಳ್ಳುವಂತೆ ಕೋರಿಕೆ.

# ಹಿಪ್ ಬದಲಿ ಶಸ್ತ್ರಚಿಕಿತ್ಸೆ ಯಶಸ್ವಿ, ಡಾ.ಮಂಜುನಾಥ ಮುದಕನಗೌಡರ ಕಾರ್ಯ ಶ್ಲಾಘನೀಯ

ಬೈಲಹೊಂಗಲ –: ಪ್ರಪ್ರಥಮವಾಗಿ ತಾಲೂಕಿನಲ್ಲಿಯೇ ಹಿಪ್ ಬದಲಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗುವ ಮೂಲಕ ಪಟ್ಟಣದ ಮಲಪ್ರಭಾ ಮಲ್ಟಿ ಸ್ಪೇಷಾಲಿಟಿ ಆಸ್ಪತ್ರೆಯ ಎಲುವು, ಕೀಲು ತಜ್ಞ ಡಾ.ಮಂಜುನಾಥ ಮುದಕನಗೌಡರ ಅವರು, ವೈದ್ಯಕೀಯ ಕ್ಷೇತ್ರದಲ್ಲಿ ಅಪರೂಪದ ಸಾಧನೆ ಮಾಡಿದ್ದಾರೆ.

ಒಂದು ಕಡೆ ಮನೆಯಲ್ಲಿ ಕಿತ್ತು ತಿನ್ನುವ ಬಡತನ, ಇನ್ನೊಂದು ಕಡೆ ಅನಾರೋಗ್ಯದಿಂದ ಬಳಲುತ್ತಿದ್ದ ಯುವಕನಿಗೆ ಡಾ.ಮುದಕನಗೌಡರ ಅವರು, ಆತ್ಮಸ್ಥೈರ್ಯ ತುಂಬಿ, ಕಡಿಮೆ ವೆಚ್ಚದಲ್ಲಿ ಸೂಕ್ತ ಚಿಕಿತ್ಸೆ ನೀಡುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಯುವಕನೊಬ್ಬರು ದಾವಿಲಾದ ನಂತರ ಅವರಿಗೆ ಹಾಸಿಗೆಯಿಂದ ಏಳಲು, ನಡೆಯಲು ಮತ್ತು ಕುಳಿತುಕೊಳ್ಳಲು ತುಂಬಾ ಕಷ್ಟವಾಗುತ್ತಿತ್ತು. ಇದು ಸಾಮಾನ್ಯವಾಗಿ ಮೂಳೆ ಸೆಳೆತ, ಸಂಧಿವಾತ, ಮೂಳೆ ಮುರಿತಗಳಿಂದ ಸೊಂಟ ಹಾನಿಗೊಳ್ಳುತ್ತದೆ. ಇದರಿಂದಾಗಿ ಸಾಮಾನ್ಯ ಚಟುವಟಿಕೆ ಕಷ್ಟಕರ ಮತ್ತು ನೋವಿನಿಂದ ಕೂಡಿರುತ್ತದೆ. ಸಂಪ್ರದಾಯವಾದಿ ಕ್ರಮಗಳಿಂದ ಯಾವುದೇ ಪರಿಹಾರವನ್ನು ಪಡೆಯದಿದ್ದಾಗ ಹಿಪ್ ಬದಲಿ ಶಸ್ತ್ರ ಚಿಕಿತ್ಸೆಯನ್ನು ಶಿಫಾರಸ್ಸು ಮಾಡಲಾಗುತ್ತದೆ.

ಈ ಶಸ್ತ್ರ ಚಿಕಿತ್ಸೆ ಸಂಪೂರ್ಣ ಯಶಸ್ವಿಯಾದ ಕೇವಲ 48 ಗಂಟೆಗಳಲ್ಲಿ ಯುವಕ ವಾಕರ್ ಸಹಾಯದೊಂದಿಗೆ 50 ಮೀಟರ್ ಸಾಮಾನ್ಯವಾಗಿ ನಡೆದಾಡಲು ಪ್ರಾರಂಭಿಸಿದರು. ಈ ಶಸ್ತ್ರಚಿಕಿತ್ಸೆ ಬೆಳಗಾವಿ ನಗರದ ಆಸ್ಪತ್ರೆಗಳ ವೆಚ್ಚಕ್ಕಿಂತ ಅತೀ ಕಡಿಮೆ ವೆಚ್ಚದಲ್ಲಿ ಮಾಡಲಾಗಿದೆ. ಇದು ಎಲ್ಲ ವೈದ್ಯಕೀಯ ಕ್ಷೇತ್ರದಲ್ಲಿ ಅತ್ಯಂತ ಯಶಸ್ವಿ ಶಸ್ತ್ರಚಿಕಿತ್ಸೆಗಳಲ್ಲಿ ಒಂದಾಗಿದೆ. ತಂತ್ರಜ್ಞಾನದಲ್ಲಿನ ಪ್ರಗತಿಯೊಂದಿಗೆ ತ್ವರಿತ, ಸುಲಭ ಮತ್ತು ಹೆಚ್ಚು ಪರಿಣಾಮಕಾರಿಯಾಗಿದೆ.



ಡಾ.ಮಂಜುನಾಥ ಮುದಕನಗೌಡರ ಅವರ ಶಸ್ತ್ರಚಿಕಿತ್ಸೆ ಯಶಸ್ವಿಗೆ ನಾಡಿನ ವೈದ್ಯರು, ಗಣ್ಯಮಾನ್ಯರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ವರದಿ:ಈಶ್ವರ ಶಿಲ್ಲೇದಾರ.

ಬಾಕ್ಸ್ ಐಟಂ: ಬೈಲಹೊಂಗಲ ಭಾಗದಲ್ಲಿ ಪ್ರಾಮಾಣಿಕವಾಗಿ ಆರೋಗ್ಯ ಸೇವೆ ನೀಡುತ್ತಿದ್ದೇನೆ. ಮಾನವೀಯತೆಯ ಹಿತದೃಷ್ಟಿಯಿಂದ ಮುಂಬರುವ ದಿನಗಳಲ್ಲಿ ಬಡವರಿಗಾಗಿ ಕಡಿಮೆ ವೆಚ್ಚದಲ್ಲಿ ಶಸ್ತ್ರ ಚಿಕಿತ್ಸೆ ನೀಡಲಾಗುವುದು. ಡಾ.ಮಂಜುನಾಥ ಮುದಕನಗೌಡರ ಎಲುವು, ಕೀಲು ತಜ್ಞ, ಬೈಲಹೊಂಗಲ.

# ಎಸ್.ಎಸ್.ಎಲ್.ಸಿ ಪರೀಕ್ಷೆಯ ಅಂಗವಾಗಿ ಪರೀಕ್ಷಾ ಸಿಬ್ಬಂದಿಗಳ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ತಹಶೀಲ್ದಾರ ಬಿ.ಎಸ್.ಕಟಕಬಾಂವಿ ಮಾತನಾಡಿದರು



ಮೂಡಲಗಿ: ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ನಕಲು ಮುಕ್ತ ಪರೀಕ್ಷೆಯನ್ನಾಗಿ ಮಾಡುವ ಮೂಲಕ ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಜೀವನಕ್ಕೆ ಉತ್ತಮವಾದ ದಾರಿಯನ್ನು ನೀಡೋಣಾ ಎಂದು ಮೂಡಲಗಿ ತಹಶೀಲ್ದಾರ ಬಿ.ಎಸ್. ಕಡಕ 'ಬಾಂವಿ ಹೇಳಿದರು.

ಮಂಗಳವಾದಂದು ಪಟ್ಟಣದ ಈರಣ್ಣ ದೇವಸ್ಥಾನದ ಕೆ.ಎಚ್.ಸೋನವಾಲಕರ ಕಲ್ಯಾಣಮಂಟಪದಲ್ಲಿ ಜರುಗಿದ ಮೂಡಲಗಿ ಶೈಕ್ಷಣಿ ವಲಯದ 2023–24ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯ ಸಿಬ್ಬಂದಿಗಳ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಚುನಾವಣೆಗಳು, ಪರೀಕ್ಷೆಗಳು, ಬರಗಾಲ ಏಕ ಕಾಲಕ್ಕೆ ಬರುವುದರಿಂದ ಅಧಿಕಾರಿ ವರ್ಗದವರಿಗೆ ಸ್ವಲ್ಪ ತೊಂದರೇ ಆದರೂ ಸಹ ವಿದ್ಯಾರ್ಥಿಗಳ ಮುಂದಿನ ಭವಿಷ್ಯಕ್ಕಾಗಿ ನಾವೇಲ್ಲರೂ ಸೇರಿ ಮೂಡಲಗಿ ಶೈಕ್ಷಣಿಕ ವಲಯದಲ್ಲಿ ಜರುಗುವ ಪರೀಕ್ಷೆಗಳನ್ನು ಕಟ್ಟುನಿಟ್ಟಾಗಿ ನಡೆಸುವ ಮೂಲಕ ಮತ್ತೋಮ್ಮೆ ರಾಜ್ಯದಲ್ಲಿ ಪ್ರಥಮ ಸ್ಥಾನಗಳಿಸುವಂತೆ ಪ್ರಮಾಣಿಕ ಪ್ರಯತ್ನ ಮಾಡೋಣಾ ಎಂದರು.

ಬಿಇಓ ಅಜೀತ ಮನ್ನಿಕೇರಿ ಮಾತನಾಡಿ, ಮೂಡಲಗಿ ಶೈಕ್ಷಣಿಕ ವಲಯದಲ್ಲಿ 87 ಪ್ರೌಢ ಶಾಲೆಗಳಿಂದ 21 ಪರೀಕ್ಷಾ ಕೇಂದ್ರಗಳಲ್ಲಿ 7957 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದು, ಪರೀಕ್ಷಾ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗದ ನಟ್ಟಿನಲ್ಲಿ 21 ಪರೀಕ್ಷಾ ಮುಖ್ಯ ಅಧಿಕ್ಷಕರು, ಪ್ರಶ್ನೆ ಪತ್ರಿಕೆ ಪಾಲಕರು, ಉಪಮುಖ್ಯ ಅಧಿಕ್ಷಕರು, ಮಾರ್ಗಾಧಿಕಾರಿಗಳು, ಸ್ಥಾನಿಕ ಜಾಗೃತ ದಳ, ಮೊಬೈಲ್ ಸ್ವಾಧೀನಧಿಕಾರಿ ಹಾಗೂ ಪರೀಕ್ಷಾ ಮಂಡಳಿಯ ನಯಮಾನುಸಾರ ಸಿಸಿ ಕ್ಯಾಮೆರಾಗಳ ಅಳವಡಿಕೆ, ಆಸನದ ವ್ಯವಸ್ಥೆ, ಪಂಚಾಯತಿಗಳಿಂದ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ, ವೈಧ್ಯಕೀಯ ಸೇವೆಯ ವ್ಯವಸ್ಥೆ ಸೇರಿದಂತೆ ಪರೀಕ್ಷೇಗಳು ಸುಗಮವಾಗಿ ನಡೆಯಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಪಿಎಸ್ಐ ಚಂದ್ರಶೇಖರ ಹೆರಕಲ ಮಾತನಾಡಿ, ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತ್ ವ್ಯವಸ್ಥೆಯನ್ನು ಮಾಡಲಾಗುವುದು ಎಂದು ಹೇಳಿದರು.

ತಾಪಂ ಇಓ ನವೀನಪ್ರಸಾದ ಕಟ್ಟಿಮನ ಮಾತನಾಡಿ, ವಿದ್ಯಾರ್ಥಿಗಳು ಯಾವುದೇ ಭಯಪಡದೇ ಪರೀಕ್ಷೆಗಳಿಗೆ ಹಾಜರಾಗಿ ಉತ್ತಮ ರೀತಿಯಲ್ಲಿ ಪರೀಕ್ಷೆಗಳನ್ನು ಬರೆಯುವ ಮೂಲಕ ವಲಯಕ್ಕೆ ಕೀರ್ತಿ ತರುವಂತೆ ತಾವೇಲ್ಲರೂ ಪ್ರಯತ್ನಿಸಬೇಕೆಂದ ಅವರು, ಚುನಾವಣೆಯ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಈ ಸಂದರ್ಭದಲ್ಲಿ ಸಿಡಿಪಿಓ ಯಲ್ಲಪ್ಪ ಗದಾಡಿ, ಪುರಸಭೆ ಪ್ರಭಾರಿ ಮುಖ್ಯಾಧಿಕಾರಿ ಸಿ ಬಿ ಪಾಟೀಲ, ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಭಾರತಿ ಕೋಣಿ, ಆರೋಗ್ಯ ನರೀಕ್ಷಕ ಚಿದಾನಂದ ಮುಗಳಖೋಡ, ಹೆಸ್ಕಾಂ ಅಧಿಕಾರಿ ಎಸ್.ಎಸ್.ಮಠ, ಮುಖ್ಯೋಪಾಧ್ಯಾಯರಾದ ರಾಘವೇಂದ್ರ ಗಗರಡ್ಡಿ, ನಾರಾಯಣ ನಪ್ಪಾಣಿ, ಸಾಹಿತಿ ಬಾಲಶೇಖರ ಬಂದಿ, ವಿವಿಧ ಶಿಕ್ಷಕ ಸಂಘಟನೆಯ ಪದಾಧಿಕಾರಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳು ಇದ್ದರು.

ಶಿಕ್ಷಣ ಇಲಾಖೆಯ ಶಿಕ್ಷಣ ಸಂಯೋಜಕರಾದ ಕೆ.ಬಸವರಾಜ ಮತ್ತು ಸತೀಶ ಬಿ.ಎಸ್ ನರೂಪಿಸಿದರು, ಶಿಕ್ಷಕ ಎ.ಪಿ.ಪರಸನ್ನವರ ವಂದಿಸಿದರು.

# ಬಳ್ಳಾರಿ ಅಗ್ರಿ ಎಂಪ್ಲಾಯಿಸ್ ಅಸೋಸಿಯೇಳನ್ ವತಿಯಿಂದ ತಿಮ್ಮನಗೌಡ ಅವರಿಗೆ ಅಧ್ದೂರಿ ಸನ್ಮಾನ



ಬಳ್ಳಾರಿ ಮಾ–:.ಬಳ್ಳಾರಿ ಗ್ರಾಮಾಂತರ ವಿಧಾನಸಭೆ ಕ್ಷೇತ್ರದ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗೆ ಹೆಚ್. ತಿಮ್ಮನಗೌಡ ಅವರನ್ನು ಅಧ್ಯಕ್ಷರ 'ನ್ನಾಗಿ ನಾಮನರ್ದೇಶನ ಮಾಡಿ ಸರಕಾರ ಆದೇಶ ಹೊರಡಿಸ ಲಾಗಿದೆ. ತಿಮ್ಮನಗೌ ಡರು ಮಾತನಾ ಡುತ್ತಾ ನನ್ನನ್ನು ಆಯ್ಕೆ ಮಾಡುವ ಮೂಲಕ ವೀರಶೈವ ಲಿಂಗಾಯತ ಸಮೂದಾಯಕ್ಕೆ ಮನ್ನಣೆ ನೀಡಿರುವ ರಾಜ್ಯ ಸರಕಾರಕ್ಕೆ ಅನಂತ ಧನ್ಯವಾದಗಳನ್ನು ತಿಳಿಸಿದರು. ಇದಕ್ಕೆ ಕಾರಣೀಬೂತರಾದ ಕಾಂಗ್ರೆಸ್ ಪಕ್ಷ ಬಳ್ಳಾರಿ ಜಿಲ್ಲಾ ಘಟಕದ ಹಿರಿಯ ನಾಯಕರಿಗೆ,ಕಾರ್ಯಕರ್ತರಿಗೆ, ವೀರಶೈವ ಲಿಂಗಾಯತ ಸಮೂದಾಯದ ಮುಖಂಡರಿಗೆ, ಪ್ರತ್ಯಕ್ಷ,ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಅಭಿನಂದನೆಗಳನ್ನು ತಿಳಿಸಿದರು.ಇದೇ ಸಂಧರ್ಬದಲ್ಲಿ ಬಳ್ಳಾರಿ ಅಗ್ರಿ ಎಂಪ್ಲಾಯೇಸ್ ಅಸೋಸಿಯೇಳನ್ ವತಿಯಿಂದ ತಿಮ್ಮನಗೌಡ ಅವರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಬಳ್ಳಾರಿಯ ಅಗ್ರಿ ಎಂಪ್ಲಾಯೀಸ್ ಅಸೋಸಿಯೇಳನ್ ಅಧ್ಯಕ್ಷರಾದ ಕೆ ಟಿ ಚವನ್, ಉಪಾಧ್ಯಕ್ಷರಾದ ಧನಂಜಯ್ ಹಾಗೂ ಕಾರ್ಯದರ್ಶಿಯಾದ ಕಾಟ್ರಾಜ್, ಸದಸ್ಯರಾದ ಬಿ ಬಸವರಾಜ್, ವೇದ ಸೀಡ್ಸ್ ರಮೇಶ್, ಕೋರಮಂಡಲ್ ಬಸನಗೌಡ, ಮಾಫಿಡ್ ಸತೀಶ್, ನೋಜಿವೀಡು ಸೀಡ್ಸ್ ಸಿರುಬಡಗಿ, ಗುರುಬಸವರಾಜ್, ಗುರುನಾಥ್ ರೆಡ್ಡಿ,ರಘುನಾಥ್ ರೆಡ್ಡಿ,ಗಣೇಶ್, ವೆಂಕಟೇಶ್, ಡೇವಿಡ್, ನಾಗರಾಜ್ ಇನ್ನಿತರರು ಉಪಸ್ಥಿತರಿದ್ದರು.

# ಹೋಳಿ ಹಬ್ಬವನ್ನು ಶಾಂತ ರೀತಿಯಿಂದ ಆಚರಿಸುವಂತೆ ಸಿಪಿಐ ಆಯ್. ಎಂ. ಮಠಪತಿ ಹೇಳಿದರು



ಯರಗಟ್ಟಿ : ಹೋಳಿ ಹಬ್ಬವನ್ನು ಶಾಂತ ರೀತಿಯಿಂದ ಆಚರಿಸುವಂತೆ ಸಿಪಿಐ ಆಯ್. ಎಂ. ಮಠಪತಿ ಹೇಳಿದರು. ಹೋಳಿ ಹಬ್ಬದ ಪ್ರಯುಕ್ತ ನಗರದ ಪ್ರಮುಖರು ಜೊತೆ ಪಟ್ಟಣದ ಠಾಣೆಯಲ್ಲಿ ಶಾಂತಿ ಸಭೆಯ ನ್ನುದ್ದೆ?ಶಿಸಿ ಅವರು ಮಾತ ನಾಡಿದರು.

ಪರೀಕ್ಷೆಗಳು ಸಮೀಪಿಸುತ್ತಿವೆ. ವಿದ್ಯಾರ್ಥಿಗಳಿಗೆ ತೊಂದ 'ರೆಯಾಗದಂತೆ ಹಬ್ಬವನ್ನು ಆಚರಿಸಬೇಕು. ಜೋರಾಗಿ ಹಲಗಿ ಬಾರಿಸಬಾರದು, ಕೆಮಿಕಲ್‌ಯುಕ್ತ ಬಣ್ಣವನ್ನು ಬಳಸಬಾರದು, ಬೈಕ್ ಮೇಲೆ ಮೂರು ಜನ ಸಂಚಾರ ಮಾಡುವಂತಿಲ್ಲ ಹಾಗೂ ಕಡ್ಡಾಯವಾಗಿ ಹೇಲ್ಮೇಟ್ ಧರಿಸಿಬೇಕು ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ¥Éundefined?ಲಿಸರೊಂದಿಗೆ ಸಹಕರಿಸಬೇಕು ಎಂದು ಸೂಚನೆ ನೀಡಿದರು. ಡಿಎಸ್ಪಿ ಎಂ. ಪಾಂಡವರಂಗಯ್ಯ ಮಾತನಾಡಿ ಈ ಬಾರಿ ಚುನಾವಣಾ ನೀತಿಸಂಹಿತೆಯಲ್ಲಿ ಹೋಳಿ ಹಬ್ಬ ಬಂದಿರುವ ಹಿನ್ನಲೆ ಹಾಗೂ ಪಟ್ಟಣದಲ್ಲಿ ಹಬ್ಬದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಶಾಂತಿಯುತ ಹಬ್ಬ ಆಚರಣೆ ಮಾಡಲು ಶಾಂತಿ ಸಭೆಯಲ್ಲಿ ಹೇಳಿದರು.

ಈ ಸಂದರ್ಭದಲ್ಲಿ ಪಿಎಸ್ ಆಯ್. ಎಂ. ಮಠಪತಿ, ಮಹಿಳಾ ಪಿಎಸ್ ಚಾಂದಬಿ ಗಂಗಾವತಿ, ಶಿವಾನಂದ ಕರಿಗೋಣವರ, ಕುಮಾರ ಹಿರೇಮಠ, ಇಮಾಮಸಾಬ ಹುಸೇನನಾಯ್ಕ, ಶಿವಾನಂದ ತೆಗ್ಗಿ, ಶಿವಲಿಂಗಪ್ಪ ನುಗ್ಗಾನಟ್ಟಿ, ಬಸಪ್ಪ ಬಾರ್ಕಿ, ಭಾಸ್ಕರ ಹಿರೇಮೆತ್ರಿ, ಹನುಮಂತ ಹೂಗಾರ, ಕೃಷ್ಣಮೂರ್ತಿ ತೊರಗಲ್, ಬಸವರಾಜ ಚನ್ನಮೇತ್ರಿ, ಈರಣ್ಣಾ ಪೂಜೇರ, ಸಿದ್ದಪ್ಪ ಮಾಳಗಿ, ಬಾಬು ಚನ್ನಮೇತ್ರಿ, ರಮೇಶ ಗಿಡ್ಡವಗೋಳ, ರಫೀಕ್ ಡಿ ಕೆ, ಬಸವರಾಜ ಕಟ್ಟಿಮನಿ, ಮಂಜುನಾಥ ನೀಲಪ್ಪನವರ ಸೇರಿದಂತೆ ಅನೇಕರು ಇದ್ದರು

# ಕುಲಗೋಡ: ಅಶೋಕ ನಾಯಿಕ ಅವರಿಗೆ ಸತ್ಕಾರ



ಮೂಡಲಗಿ: ತಾಲೂಕಿನ ಕುಲಗೋಡ ಗ್ರಾಮದಲ್ಲಿ ಗೋಕಾಕ ಟಿ.ಎ.ಪಿ.ಸಿ.ಎಮ್.ಎಸ್ ಅಧ್ಯಕ್ಷರಾಗಿ ಆಯ್ಕೆಯಾದ ಅಶೋಕ ನಾಯಿಕ ಅವರನ್ನು ಕುಲಗೋಡ ದಲಿತ ಸಂಘರ್ಷ ಸಮಿತಿ ಸದಸ್ಯರು ಮತ್ತು ಮುಖಂಡರು ಸತ್ಕರಿಸಿ ಗೌರವಿಸಿದರು.

ಸಂದರ್ಭದಲ್ಲಿ ಜಯಪ್ಪ ಹಿರೇಮೇತ್ರಿ. ಅಶೋಕ ಹಿರೇಮೇತ್ರಿ. ಪ್ರಕಾಶ ಹಿರೇಮೇತ್ರಿ. ಬಸು ಬಿಲಕುಂದಿ. ನಾಗಪ್ಪ ಹಾದಿಮನ. ಯಮನಪ್ಪ ಸಣ್ಣಮೇತ್ರಿ. ಲಕ್ಷ್ಮಣ ನಂದಿ. ಅನಲ ಹಾದಿಮನ. ಲಕ್ಷ್ಮಣ ಹಿರೇಮೇತ್ರಿ. ಲಕ್ಕಪ್ಪ ಸಣ್ಣಮೇತ್ರಿ. ಅನಲ ಕಳ್ಳಿಮನ ಮತ್ತಿತರರು ಇದ್ದರು

ಫೋಟೋ ಕ್ಯಾಪ್ಸನ> ಮೂಡಲಗಿ: ಕುಲಗೋಡ ಗ್ರಾಮದಲ್ಲಿ ಗೋಕಾಕ ಟಿ.ಎ.ಪಿ.ಸಿ.ಎಮ್.ಎಸ್ ಅಧ್ಯಕ್ಷರಾಗಿ ಆಯ್ಕೆಯಾದ ಅಶೋಕ ನಾಯಿಕ ಅವರನ್ನು ಕುಲಗೋಡ ದಲಿತ ಸಂಘರ್ಷ ಸಮಿತಿ ಸದಸ್ಯರು ಮತ್ತು ಮುಖಂಡರು ಸತ್ಕರಿಸಿ ಗೌರವಿಸಿದರು.

# ನಗರೋತ್ಥಾನ ಕಾಮಗಾರಿ ಭೂಮಿ ಪೂಜೆ



ಗದಗ,ಮಾ–: ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ.ಪಾಟೀಲ ಅವರು ಶನವಾರದಂದು ಜಿಲ್ಲಾಡಳಿತ, ನಗರಭಿವೃದ್ಧಿ ಇಲಾಖೆ ವತಿಯಿಂದ ಬೆಟಗೇರಿ ನಗರಸಭೆಯ 35 ನೇ ವಾರ್ಡಿನ ನಗರೋತ್ಥಾನ ಕಾಮಗಾರಿಯ ಭೂಮಿ ಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಸಿದ್ದು ಪಾಟೀಲ, ಎಲ್.ಡಿ.ಚಂ ದಾವರಿ,ಬಿ. ಬಿ.ಅಸೂಟಿ, ಅಶೋಕ ಮಂದಾಲಿ , ಗಣ್ಯರು, ಹಿರಿಯರು ಹಾಜರಿದ್ದರು

# ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಅಧ್ಯಕ್ಷರಾಗಿ ಹೆಚ್.ತಿಮ್ಮನಗೌಡ



ಬಳ್ಳಾರಿ ಮಾ –: ಬಳ್ಳಾರಿ ಗ್ರಾಮಾಂತರ ವಿಧಾನಸಭೆ ಕ್ಷೇತ್ರದ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗೆ ಹೆಚ್.ತಿಮ್ಮನಗೌಡ ಅವರನ್ನು ಅಧ್ಯಕ್ಷರನ್ನಾಗಿ ನಾಮನರ್ದೇಶನ ಮಾಡಿ ಸರಕಾರ ಆದೇಶ ಹೊರಡಿಸಿದೆ. ಈ ಸಂಧರ್ಭದಲ್ಲಿ ಅವರು ಮಾತನಾಡುತ್ತಾ ನನ್ನನ್ನು ಆಯ್ಕೆ ಮಾಡುವ ಮೂಲಕ ವೀರಶೈವ ಲಿಂಗಾಯತ ಸಮೂದಾಯಕ್ಕೆ ಮನ್ನಣೆ ನೀಡಿರುವ ರಾಜ್ಯ ಸರಕಾರಕ್ಕೆ ಅನಂತ ಧನ್ಯವಾದಗಳನ್ನು ತಿಳಿಸಿದರು. ಇದಕ್ಕೆ ಕಾರಣೀಬೂತರಾದ ಕಾಂಗ್ರೆಸ್ ಪಕ್ಷ ಬಳ್ಳಾರಿ ಜಿಲ್ಲಾ ಘಟಕದ ಹಿರಿಯ ನಾಯಕರಿಗೆ,ಕಾರ್ಯಕರ್ತರಿಗೆ, ವೀರಶೈವ ಲಿಂಗಾಯತ ಸಮೂದಾಯದ ಮುಖಂಡರಿಗೆ, ಪ್ರತ್ಯಕ್ಷ,ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಅಭಿನಂದನೆಗಳನ್ನು ತಿಳಿಸಿದರು.

# ಅದ್ದೂರಿಯಾಗಿ ನಡೆದ ಆದಿದೇವತೆ ಶ್ರೀಕನಕ ದುರ್ಗಮ್ಮ ಸಿಡಿಬಂಡಿ ರಥೋತ್ಸವ–ಹರಿದು ಬಂದ ಜನಸಾಗರ



ಬಳ್ಳಾರಿ ಮಾ –: ಬಳ್ಳಾರಿ ನಗರದ ಅದಿದೇವತೆ ಶ್ರೀ ಕನಕ ದುರ್ಗಮ್ಮ ಸಿಡಿ ಬಂಡಿ ರಥೋತ್ಸವ ಮಂಗಳವಾರದಂದು ಅದ್ದೂರಿಯಾಗಿ ನಡೆಯಿತು.

ಹಿಂದೂ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಸಿಡಿಬಂಡಿ ರಥೋತ್ಸವಕ್ಕೆ ಸಂಬಂಧಿಸಿದಂತೆ ಮುಂಜಾಗ್ರತ ಕ್ರಮವಾಗಿ ಭಕ್ತರಿಗೆ ದೇವಿಯ ದರ್ಶನ, ಪ್ರಸಾದ ವಿತರಣೆ, ಅಂಗಡಿ ಮುಂಗಟ್ಟು, ಸಾರಿಗೆ ವ್ಯವಸ್ಥೆ ಮುಂತಾದ ಭಕ್ತರಿಗೆ ಬೇಕಾದ ಎಲ್ಲಾ ಸಕಲ ಸಿದ್ಧತೆಗಳನ್ನು ಅಚ್ಚು ಕಟ್ಟಾಗಿ ನಿರ್ವಹಣೆ ಮಾಡಿದ್ದರು.ಸಿಡಿ ಬಂಡಿ ರಥೋತ್ಸವ ಹಿನ್ನೆಲೆ ಚಿನ್ನದ ಆಭರಣಗಳಿಂದ ಕನಕ ದುರ್ಗಮ್ಮ ವಿಗ್ರಹ ಸಿಂಗಾರ ಮಾಡಿದ್ದು,ಮತ್ತು ದೇವಸ್ಥಾನವನ್ನು ತಳಿರು ತೋರಣ ಮತ್ತು ಹೂಗಳಿಂದ ಅಲಂಕರ ಮಾಡಲಾಗಿತ್ತು.

ಹಿಂದೂ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ದೇವಸ್ಥಾನದ ಮುಂಭಾಗದಲ್ಲಿ ರಥೋತ್ಸವಕ್ಕೆ ಆಗಮಿಸಿದ ಭಕ್ತರಿಗೆ ದರ್ಶನ ಪಡೆಯಲು ಕೌಂಟರ್, ಪ್ರಸಾದ ವಿತರಣೆ ಹಾಗೂ ಕಾಯಿ ಕುಂಕುಮ ಹೂ, ಹಣ್ಣು ಮುಂತಾದವುಗಳನ್ನು ತೆಗೆದುಕೊಂಡು ಹೋಗಿ ಪೂಜೆ ಸಲ್ಲಿಸಲು ಅಂಗಡಿ ಮುಂಗಟ್ಟುಗಳನ್ನು ವ್ಯವಸ್ಥೆ ಮಾಡಲಾಗಿತ್ತು.

ಬೆಳಗಿನ ಜಾವ ದಿಂದಲೆ ಕನಕ ದುರ್ಗಮ್ಮ ದೇವಸ್ಥಾನಕ್ಕೆ ನಗರ ಪ್ರದೇಶ ಸೇರಿದಂತೆ ಇತರೆ ಗ್ರಾಮೀಣ ಹಾಗೂ ಸುತ್ತಮುತ್ತಲಿನ ಜಿಲ್ಲೆ, ರಾಜ್ಯಗಳ ಜನರು ಕುಟುಂಬ ಸಮೇತರಾಗಿ ಬಂದು ದೇವಿಯ ದರ್ಶನ ಪಡೆದು ಪುನೀತರಾದರು. ಇನ್ನೂ ಆಂದ್ರ ಪ್ರದೇಶದ ಜನರು ಕನಕ ದುರ್ಗಮ್ಮ ದೇವಿಯ ದರ್ಶನ ಪಡೆಯಲು ನೂರಾರು ಭಕ್ತರು ಆಗಮಿಸುತ್ತಾರೆ. ಅಷ್ಟು ಜನಪ್ರಿಯತೆ ಪಡೆದಿರುವ ಈ ಆ ದೇವತೆ ಶಕ್ತಿಯ ನೆಲೆಬಿಡು ಬಳ್ಳಾರಿ ಎಂಬುದು ಗೊತ್ತಾಗಿದೆ.ಬಳ್ಳಾರಿ ಪ್ರದೇಶ ಬಿಸಿಲು ನಾಡು ಎಂದು ಹೆಸರು ವಾಸಿ ಯಾಗಿದೆ ಇದನ್ನು ಭಕ್ತರು ಮನಗಂಡು ಬೇರೆ ಕಡೆಯಿಂದ ಬಂದ ಸಾವಿರಾರು ಭಕ್ತರಿಗೆ ಬಿಸಿಲಿನ ತಾಪವನ್ನು ಕಡಿಮೆ ಮಾಡುವ ಸದುದ್ದೇಶದಿಂದ ದೇವಿಯ ದರ್ಶನ ಪಡೆಯಲು ಬಂದಾಗ ಮಜ್ಜಿಗೆ, ಅನ್ನ,ನೀರು ನೀಡಿ ಅವರಿಗೆ ಸಹಾಯಹಸ್ತ ನೀಡಿದ್ದಾರೆ.ಈ ಬಾರಿ ವಿಶೇಳವಾಗಿ ಕನಕ ದುರ್ಗಾದೇವಿ ಯಿಂದ ಹಾದು ಹೋಗುವ ರಸ್ತೆಗಳಿಗೆ ವಿದ್ಯುತ್ ದೀಪಲಾಂಕರ ಮೂರು ದಿನಗಳ ಮುಂಚೆ ಅಳವಡಿಸಿ ಕಂಗೊಳಿಸುತ್ತಿದ್ದವು.

ಪೊಲೀಸ್ ಇಲಾಖೆವತಿಯಿಂದ ದೇವಸ್ಥಾನದಲ್ಲಿ ಸೂಕ್ತ ಭದ್ರತೆ ವ್ಯವಸ್ಥೆ ಒದಗಿಸಲಾಗಿತ್ತು. ದೇವಸ್ಥಾನಕ್ಕೆ ಆಗಮಿಸುವ ರಸ್ತೆಗಳಲ್ಲಿ ಭಕ್ತರಿಗೆ ಅನುಕೂಲವಾಗುವ ದೃಷ್ಟಿಯಿಂದ ಪೊಲೀಸ್ ಇಲಾಖೆ ಸಿಬ್ಬಂದಿ ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು.

ನಂತರ ಸಂಜೆ 5 ಗಂಟೆಗೆ ಸಿಡಿಬಂಡಿ ರಥಕ್ಕೆ ಚಾಲನೆ ನೀಡಲಾಯಿತು. ನಡುವೆ ರಥವು ದೇವಸ್ಥಾನದ ಸುತ್ತ ಮೂರು ಸುತ್ತು ಪ್ರದಕ್ಷಣೆ ಮಾಡುವ ಸಮಯದಲ್ಲಿ ಜಯಘೋಳದ ನಡುವೆ ನೆರವೇರಿತು. ಭಕ್ತರು ಬಾಳೆ ಹಣು ಹಾಗೂ ಕೋಳಿಯನ್ನು ತೂರಿ ಎಸೆದು ದೇವಿ ಕೃಪೆಗೆ ಪಾತ್ರರಾದರು.ಇದಕ್ಕೂ ಮುನ್ನ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ನಗರದ ಶಾಸಕ ನಾರಾ ಭರತ್ ರೆಡ್ಡಿ, ಅವರು ದೇವಸ್ಥಾನಕ್ಕೆ ಭೇಟಿ ನೀಡಿ ದೇವಿ ದರ್ಶನ ಪಡೆದರು. ಸಿಡಿ ಬಂಡಿ ರಥೋತ್ಸವವನ್ನು ನೋಡಲು ಭಾರಿ ಭಕ್ತ ಸಮೂಹ ಹರಿದುಬಂದಿತ್ತು.

# ಬಿಜೆಪಿ ಯುವ ಮೋರ್ಚಾ ಜಿಲ್ಲಾ ಮತ್ತು ಮಂಡಲ ಪದಾಧಿಕಾರಿಗಳ ಪರಿಚಯಾತ್ಮಕ ಸಭೆ



ಬಳ್ಳಾರಿ ಮಾ –: ಭಾರತೀಯ ಜನತಾ ಪಾರ್ಟಿಯ ಯುವ ಮೋರ್ಚಾ ಜಿಲ್ಲಾ ಮತ್ತು ಮಂಡಲ ಪದಾಧಿಕಾರಿಗಳ ಪರಿಚಯಾತ್ಮಕ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಭೆಯಲ್ಲಿ ಜಿಲ್ಲೆಯ ಯುವ ಮೋರ್ಚಾ ಅಧ್ಯಕ್ಷರಾದ ಎಂ ಎಸ್ ಸಿದ್ದಪ್ಪ ಹಾಗೂ ಪೇರೆಂಟ್ ಬಾಡಿಯ ಜಿಲ್ಲಾಧ್ಯಕ್ಷರಾದ ಅನಲ್ ನಾಯ್ಡು ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಸೋಮಶೇಖರ್ ಗೌಡ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯುವ ಮೋರ್ಚಾ ಎಸ್ ರಾಘವೇಂದ್ರ ಚಲವಾದಿ ಹಾಗೂ ಸುದರ್ಶನ್ ರೆಡ್ಡಿ ಜಿಲ್ಲೆಯ ಪದಾಧಿಕಾರಿಗಳು ಹಾಗೂ ಆರು ಮಂಡಲದ ಪದಾಧಿಕಾರಿಗಳು ಈ ಪರಿಚಯನಾತ್ಮಕ ಸಭೆಯಲ್ಲಿ ಭಾಗಿಯಾಗಿದ್ದರು.